ಕುಟುಂಬಗಳಿಗೆ ರಾಜ್ಯ ಸರ್ಕಾರದ ಬೊಕ್ಕಸದಿಂದ ಇಲ್ಲಿಯವರೆಗೆ ಹಸಿರು ಕಾರ್ಡುದಾರರಿಗೆ ರಾಜ್ಯ ಸರ್ಕಾರದಿಂದ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಕಳೆದ ವರ್ಷ ಕೇಂದ್ರ ಸರ್ಕಾರದಿಂದ 175 ಕೋಟಿ ರೂಪಾಯಿಗಳು ರಾಜ್ಯ ಸರ್ಕಾರದಿಂದ 300 ಕೋಟಿ ರೂಪಾಯಿಗಳ ಸಬ್ಸಿಡಿ ಇರುತ್ತದೆ. ಈ ವರ್ಷದಿಂದ ರಾಜ್ಯ ಸರ್ಕಾರವು 20 ಕೆ.ಜಿ. ಅಕ್ಕಿಯನ್ನು ಕೊಡಲು ತೀರ್ಮಾನ ಮಾಡಿರುವುದರಿಂದ ರಾಜ್ಯ ಸರ್ಕಾರ 450 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಹಾಗೂ ಕೇಂದ್ರ ಸರ್ಕಾರ 350 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುವುದಾಗಬಹುದು. ಹೆಚ್ಚಿಗೆ 10 ಕೆ.ಜಿ. ಅಕ್ಕಿಯನ್ನು ಕಡಿಮೆ ದರದಲ್ಲಿ ಬಿಪಿಎಲ್ ಕುಟುಂಬಗಳಿಗೆ ಕೊಡಬೇಕು ಎನ್ನುವ ನಿರ್ಧಾರವನ್ನು ನಾವು ಮಾಡಿದ್ದರಿಂದ ರಾಜ್ಯ ಸರ್ಕಾರದಿಂದ 78 ಕೋಟಿ ರೂಪಾಯಿಗಳ ಸಬ್ಸಿಡಿ ಹೆಚ್ಚಿಗೆ ಕೊಡಬೇಕೆನ್ನುವ ನಿರ್ಧಾರದಿಂದ ಈ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿರುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಾ ಇರುವುದು ಇಷ್ಟೇ. ಸರ್ಕಾರದಿಂದ ಒಂದು ಕಮಿಟ್‌ಮೆಂಟ್ ಬೇಕಾಗಿದೆ. ಕೇಂದ್ರ ಸರ್ಕಾರದ ಪರವಾಗಿ 58 ಲಕ್ಷ ಜನರು ಬಡತನ ರೇಖೆಗಿಂತ ಕೆಳಗೆ ಇರುವವರು ಇದ್ದಾರೆ, ರಾಜ್ಯ ಸರ್ಕಾರದ ಪರವಾಗಿ 30 ಲಕ್ಷ ಜನರಿದ್ದಾರೆ. Why you are going for another survey of the people who are below the poverty line? Why you are doing it? I am attributing political motive there.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೆ, 58 ಲಕ್ಷ ಎಂದು ಇರುವುದು ಡಿಫೆಕ್ಟೀವ್ ಇದೆ, ಕೆಲವು ಜಿಲ್ಲೆಗಳಲ್ಲಿ 150 ಪರ್ಸೆಂಟ್ ನಷ್ಟಿದೆ ನೀವು ಹಸಿರು ಕಾರ್ಡನ್ನು ಕೊಟ್ಟಂತಹ ಉದಾಹರಣೆಗಳಿರುವುದರಿಂದ ಇದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಅಧಿಕಾರಕ್ಕೆ ಬಂದು 12 ತಿಂಗಳಾಯಿತು, ಅವರು ಇನ್ನೂ ಇದರ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದಾರೆ. ಇವರು ಹಸಿರು ಕಾರ್ಡನ್ನು ರದ್ದು ಮಾಡುವುದರಲ್ಲಿ ದುರುದ್ದೇಶ ಇದೆ. ಇದನ್ನು ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಈ ಸರ್ಕಾರದಿಂದ ಇದರ ಬಗ್ಗೆ ನಮಗೆ ಸರಿಯಾದಂತಹ ಮಾಹಿತಿ ಬಂದಿಲ್ಲ. ಇವರು ಕಾಂಗ್ರೆಸ್ ಕಾರ್ಯಕರ್ತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ನಾವು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಮಾನ್ಯ ಸಿಂಧ್ಯಾರವರ ನೇತೃತ್ವದಲ್ಲಿ ಜನತಾದಳ (ಯು)
ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ಸರ್ಕಾರದವರು 3 ತಿಂಗಳಿಂದ ಸುಮಾರು 28 ಲಕ್ಷ ಹಸಿರು ಕಾರ್ಡ್‌ಗಳನ್ನು ಏಕಾಏಕಿ ರದ್ದು ಮಾಡಿದರು. ನಿಮಗೆ ವಾಸ್ತವಾಂಶ ಗೊತ್ತಿಲ್ಲದಿದ್ದರೆ ತಾವು ತಮ್ಮ ಅಧಿಕಾರಿಗಳಿಂದ ಸರಿಯಾದ ಅಂಕಿಅಂಶಗಳನ್ನು ತರಿಸಿಕೊಳ್ಳಿ. ಮಾನ್ಯ ಮಂತ್ರಿಗಳು

ತಾವು ನಾನು ಹೇಳುತ್ತಿರುವುದನ್ನು ಕೇಳಬೇಕು, ತಮ್ಮ ಬಗ್ಗೆ ನಮಗೆ ಗೌರವವಿದೆ, ನಿಮ್ಮಿಂದ ನಮಗೆ ಒಳ್ಳೆಯ ಕೆಲಸಗಳಾಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೆ ಜನತಾದಳ ಸರ್ಕಾರವಿದ್ದಾಗ ಸುಮಾರು 7 ರಿಂದ 8 ಲಕ್ಷ ಕಾರ್ಡುಗಳನ್ನು ವಾಪಸ್ಸು ಪಡೆಯತಕ್ಕಂತಹ ಒಂದು ಪಟ್ಟಿಯನ್ನು ಮಾಡಿದ್ದರು.

ಶ್ರೀ ಡಿ.ಬಿ. ಇನಾಂದಾರ್ : ಅಧ್ಯಕ್ಷರೇ, Comptroller and Auditor General of India ಅವರಿಂದ ಒಂದು ಆಡಿಟ್ ಸ್ಟೇಟ್‌ಮೆಂಟ್ ಬಂದು, ಮುಖ್ಯಮಂತ್ರಿಗಳು 8.22 ಲಕ್ಷ ಕುಟುಂಬಗಳು ತಾವೇ ಸ್ವತಃ ಅನರ್ಹರು ಎಂದು ಹೇಳಿದಂತವರನ್ನು they have been carried in the Green card List as below Poverty Line. CAG has passed audit comments against the State Government. ಆ 8.22 ಲಕ್ಷ ಕುಟುಂಬಗಳವರನ್ನು ಮಾತ್ರ ಯಾರು ವಾಲೆಂಟರಿಯಾಗಿ ನಾವು ಬಿಲೋ ಪಾವರ್ಟಿ ಲೈನ್ ಕೆಳಗಡೆ ಇಲ್ಲ, ನಾವು ಹಸಿರು ಕಾರ್ಡು ಹೊಂದುವುದಕ್ಕೆ ಅರ್ಹರಲ್ಲ ಎಂದು ಹೇಳಿದಂಥ ಜನರನ್ನು ಮಾತ್ರ ನಾವು ಕಡಿಮೆ ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಚಿವರು ತಪ್ಪು ಸ್ಟೇಟ್‌ಮೆಂಟನ್ನು ಕೊಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾವುದು ತಪ್ಪು?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಕಾಗೋಡು ತಿಮ್ಮಪ್ಪನವರೆ, ತಾವು ದಯವಿಟ್ಟು ಕೇಳಿ.

ಅಧ್ಯಕ್ಷರು : ಮಾನ್ಯ ಅರಗ ಜ್ಞಾನೇಂದ್ರರವರೆ, ತಾವು ಮಾತನಾಡಿ ಆಯಿತೇ, ಇದರ ಬಗ್ಗೆ ಮಾತನಾಡುವವರು ಬೇಕಾದಷ್ಟು ಜನರಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶವನ್ನು ಕೊಡಬೇಕು. ಇದರಿಂದಾಗಿ ಬಡವರಿಗೆ ವಂಚನೆಯಾಗಿದೆ.

ಅಧ್ಯಕ್ಷರು : ನಾನು ತಮಗೆ ಮಾತನಾಡಲು ಬೇರೆ ಸಮಯವನ್ನು ಕೊಡುತ್ತೇನೆಂದರೂ ತಾವು ಬೇಡವೆಂದು ಹೇಳುತ್ತೀರಿ.

ಶ್ರೀ ಅರಗ ಜ್ಞಾನೇಂದ್ರ : ಈಗ ಕಳೆದ 3 ತಿಂಗಳಿಂದ ಏಕಾಏಕಿಯಾಗಿ ಸ್ವಲ್ಪ ಹಸಿರು ಕಾರ್ಡನ್ನು ರದ್ದು ಮಾಡಿದರು. ಅವರು ಸೆಲ್ಫ್-ಡೆಕ್ಲರೇಷನನ್ನು ಕೊಟ್ಟುಕೊಂಡಿದ್ದಾರೆ, ನಾವು ಈ ರೀತಿಯಾಗಿ ಮಾಡಲು ಬರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ತಾವು ಇದನ್ನು ಬೇಕಾದರೆ ತೆಗೆದು ನೋಡಿ ಇದು ಕಡತದಲ್ಲಿದೆ. ಯಾರೂ ಕೂಡ ಡೆಕ್ಲರೇಷನನ್ನು ಕೊಟ್ಟಿಲ್ಲ.

SRI D.B. INAMDAR : 8.22 Lakhs families have said that they are not below the poverty line.

(Interruptions)

ಶ್ರೀ ಅರಗ ಜ್ಞಾನೇಂದ್ರ : ಅಂಗನವಾಡಿ ಕಾರ್ಯಕರ್ತೆಯರಿಗೆ ಇವರು ಫಾರಂನ್ನು ಕೊಟ್ಟು

ಕಳುಹಿಸಿದರು. ನಿಮಗೆ ಹೆಂಚಿನ ಮನೆ ಇರುವುದರಿಂದ ಹಸಿರು ಕಾರ್ಡು ಬರುವುದಿಲ್ಲವೆಂದು ಹೇಳಿದರು. ಇವತ್ತಿನ ದಿವಸ ಜನತಾ ಮನೆಯಿರುವವರು ಹೆಂಚಿನ ಮನೆಯಲ್ಲಿರುತ್ತಾರೆ. ಇದರ ಬಗ್ಗೆ ತಪ್ಪು ಮಾಹಿತಿ ಹೋಗುತ್ತಿದೆ.

MR. SPEAKER : It is sufficiently discussed. I am sorry. ಮಳೆ ಹಾನಿಯ ಬಗ್ಗೆ ಮಾತನಾಡುವವರು ಬೇಕಾದಷ್ಟು ಸದಸ್ಯರಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಇದು ಕರ್ನಾಟಕ ರಾಜ್ಯದ ಬಡವರ ಪ್ರಶ್ನೆಯಾಗಿದೆ, ಇದು ಅವರ ದಿನನಿತ್ಯದ ಅನ್ನದ ಪ್ರಶ್ನೆಯಾಗಿದೆ. ಇದು ತಮಗೂ ಕೂಡ ಗೊತ್ತಿರಬಹುದು. ಅಂಗನವಾಡಿ ಕಾರ್ಯಕರ್ತೆಯರನ್ನು ಕಳುಹಿಸಿ ಒಂದು ಫಾರಂನ್ನು ಕೊಟ್ಟು ಅವರಿಂದ ಸಹಿಯನ್ನು ಪಡೆದುಕೊಂಡರು. ಅದರ ಆಧಾರದ ಮೇಲೆ ಇವರು ಸೆಲ್ಫ್-ಡೆಕ್ಲರೇಷನನ್ನು ಕೊಟ್ಟರು ಎಂದು ಇವರು ಹೇಳುತ್ತಾರೆ. ಒಂದೊಂದು ಕ್ಷೇತ್ರದಲ್ಲಿ 1000-1200 ಹಸಿರು ಕಾರ್ಡುಗಳನ್ನು ಇವರು ರದ್ದು ಮಾಡಿದ್ದಾರೆ.

ಅಧ್ಯಕ್ಷರು : ನಿಮ್ಮ ಸಲಹೆಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ, ಇದರ ಬಗ್ಗೆ ಪುನರ್ ವಿಮರ್ಶೆ ಮಾಡುತ್ತಾರೆ. 4-5 ಜನರು ಒಟ್ಟಿಗೆ ಮಾತನಾಡುವುದನ್ನು ಬರೆದುಕೊಳ್ಳಬೇಡಿ, ಒಬ್ಬರು ಮಾತನಾಡುವುದನ್ನು ಮಾತ್ರ ಬರೆದುಕೊಳ್ಳಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಇದರ ವಿರುದ್ಧ ನಮ್ಮ ಬಿಜೆಪಿ ನಮ್ಮ ಪಕ್ಷವು ಪ್ರತಿಭಟನೆ ಮಾಡುತ್ತದೆ. ಇದು ಬಡವರಿಗೆ ಅನ್ನವನ್ನು ಕಿತ್ತುಕೊಳ್ಳುವಂಥ ಪ್ರಶ್ನೆ. ನೀವು ಸರ್ವೆ ಮಾಡುವ ತನಕ ಆ ಹಸಿರು ಕಾರ್ಡನ್ನು ರದ್ದು ಮಾಡದೆ ಅದನ್ನೇ ಮುಂದುವರಿಸಬೇಕು. ಈ ಬೋಗಸ್ ಕಾರ್ಡನ್ನು ರದ್ದು ಮಾಡುವುದರಲ್ಲಿ ನಮ್ಮ ಬೆಂಬಲ ಇದೆ. ನಿಮ್ಮ ಪಕ್ಷಕ್ಕೆ ಓಟು ಕೊಡದೆ ಇರುವವರೆಲ್ಲರ ಹಸಿರು ಕಾರ್ಡನ್ನು ರದ್ದು ಮಾಡಿದ್ದೀರಿ. ಇದು ಬಡವರದು, ದಲಿತರದನ್ನು ನೀವು ಅಕ್ಸೆಪ್ಟ್ ಮಾಡಿಕೊಳ್ಳಿ.

(ಗೊಂದಲ)

MR. SPEAKER : It is sufficiently discussed. Please resume your seats. ಇದರ ಬಗ್ಗೆ ಬೇಕಾದಷ್ಟು ಡಿಸ್‌ಕಸ್ ಆಗಿದೆ. ತಾವು ಕೊಟ್ಟ ಸಲಹೆಗಳನ್ನು ಸರ್ಕಾರದವರು ತೆಗೆದುಕೊಂಡು ಇದರ ಬಗ್ಗೆ ಏನು ಮಾಡಬೇಕೋ ಅದನ್ನು ಅವರು ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಶ್ರೀ ಇನಾಂದಾರ್‌ರವರು ಕ್ಲಾರಿಫಿಕೇಷನನ್ನು ಸರಿಯಾಗಿ ಕೊಡಲಿಲ್ಲ. ಇವತ್ತು ಸರ್ವೆ ಮಾಡಿರುವುದು ತಪ್ಪಾಗಿದೆ, ಇವರು ಕೇಂದ್ರದ ಮೇಲೆ ಗೂಬೆ ಕೂರಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇವರು ಪಟ್ಟಿಯನ್ನು ಮಾಡಿ ಸಬ್ಸಿಡಿಯನ್ನು ತೆಗೆದುಕೊಳ್ಳುವಂಥದ್ದನ್ನು ಸರಿಯಾಗಿ ಮಾಡಿದ್ದರೆ ಈ ಸಮಸ್ಯೆಯು ಬರುತ್ತಿರಲಿಲ್ಲ. ಅದಕ್ಕಾಗಿ ಇವರು ಏನು ಮಾಡುತ್ತಿದ್ದಾರೆಂದರೆ, ಈ ಹಳದಿ ಕಾರ್ಡ್ ಲಿಸ್ಟನ್ನು ತಯಾರು ಮಾಡುವಂಥಾದ್ದರಲ್ಲಿ ವೆಸ್ಟೆಡ್ ಇಂಟರೆಸ್ಟ್ ಸೇರಿದೆ. ಇದರಲ್ಲಿ ಇವರಿಗೆ ಬೇಕಾದಂತಹವರನ್ನು ಮುದ್ದಾಂಗೆ ಸೇರಿಸುತ್ತಿದ್ದಾರೆ. ಇದರ

ಬಗ್ಗೆ ಪ್ರತಿಯೊಂದು ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಕಂಪ್ಲೈಂಟ್ ಬರುತ್ತಿದೆ ಇಷ್ಟಾದರೂ ಸರ್ಕಾರ ಇದರ ಬಗ್ಗೆ ಯಾವುದೋ ಒಂದು ಗೈಡ್‌ಲೈನ್ಸನ್ನು ಇಟ್ಟುಕೊಂಡು, ಸರಿಯಾದಂತಹ ಅರ್ಹರಿದ್ದವರಿಗೆ ಅದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರಕ್ಕೆ ಕಲ್ಪನೆ ಇಲ್ಲ. ಇವರು ಮುದ್ದಾಂ ಆಗಿ ಹಳದಿ ಲಿಸ್ಟನ್ನು ತಮಗೆ ಬೇಕಾದವರಿಗಾಗಿ ತಯಾರು ಮಾಡಿ ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಇದನ್ನು ನಾವು ಪ್ರೋಟೆಸ್ಟ್ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರ ನೇತೃತ್ವದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ನಾನು ಮೊದಲೇ ತಿಳಿಸಿದ್ದರ ಪ್ರಕಾರ ಮಳೆ ಹಾನಿಯ ಬಗ್ಗೆ ಶ್ರೀಮಾನ್ ಬೈರೇಗೌಡರು ಈಗ ಮಾಡನಾಡುತ್ತಾರೆ. ಈ ದಿನ 7 ಗಂಟೆಯೊಳಗಾಗಿ ಇದರ ಬಗ್ಗೆ ಮಾತನಾಡಿ ಮುಗಿಸಬೇಕು. Discussion should be over by 7.00 PM today and tomorrow Hon'ble Minister Sri Srikantaiah will reply.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಕ್ಲಾರಿಫಿಕೇಷನನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ : ಈಗ ಕ್ಲಾರಿಫಿಕೇಷನ್ಸ್ ಮುಗಿದಿದೆ, ಈಗ ಅವರು .....

ಅಧ್ಯಕ್ಷರು : ತಾವೇ ಕ್ಲಾರಿಫಿಕೇಷನನ್ನು ಕೇಳಿ, ಮುಗಿದಿದೆ ಎಂದು ತಾವು ಹೇಗೆ ಹೇಳುತ್ತೀರಿ?

ಶ್ರೀ ಸಿ. ಬೈರೇಗೌಡ : ಇವರು ಖಾಲಿ ಕುರ್ಚಿಗೋ ಅಥವಾ ಭರ್ತಿ ಸದನಕ್ಕೋ ಕ್ಲಾರಿಫಿಕೇಷನನ್ನು ಕೊಡುತ್ತಾರೆಯೇ?

ಅಧ್ಯಕ್ಷರು : ಇದರ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತದೆ ಬಿಡಿ. ಅಥವಾ ತಾವು ಎಲ್ಲರನ್ನು ಸದನಕ್ಕೆ ಕರೆದುಕೊಂಡು ಬನ್ನಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಕರೆದುಕೊಂಡು ಬರುವುದಿಲ್ಲ, ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾನು ಕೂಡ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಶ್ರೀ ಸಿ. ಭೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಎಸ್.ಎಂ. ಕೃಷ್ಣ : ಇದು ಅತ್ಯಂತ ವಿಚಿದ್ರಕಾರಿಯಾದ ನಡವಳಿಕೆಯಾಗಿದೆ.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೆ, ಇವತ್ತು ಬಡವರ ಬಗ್ಗೆ ಚಿಂತನೆ ಮಾಡುವಂತಹ ಯಾವುದಾದರೂ ಸರ್ಕಾರ ಇದೆಯೆಂದರೆ ಅದು ನಮ್ಮ ಸರ್ಕಾರವಾಗಿದೆ ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಬಡವರಿಗೆ 100 ಪರ್ಸೆಂಟ್‌ಗಿಂತ ಜಾಸ್ತಿ ಕಾರ್ಡುಗಳನ್ನು ಕೊಟ್ಟರೆ, ಇನ್ನು ಕಡುಬಡವರಿಗೆ ಕಾರ್ಡುಗಳೇ ಸಿಕ್ಕಿರುವುದಿಲ್ಲ. ಆ ವ್ಯವಸ್ಥೆಯನ್ನು ಬದಲಿ ಮಾಡುವಂತಹ